ವಿಷಯ:- ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 184 (499)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ):- ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕರ್ನಾಟಕ ಹ್ಯಾಂಡಲೂಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್ (ಕೆಹೆಚ್‌ಡಿಸಿ) ಪ್ರಧಾನ ಕಛೇರಿಯನ್ನು ಹುಬ್ಬಳ್ಳಿಗೆ ವರ್ಗಾಯಿಸುವ ವಿಚಾರ ಯಾವ ಹಂತದಲ್ಲಿದೆ.

ಆ) ಸದರಿ ಕಛೇರಿಯನ್ನು ತ್ವರಿತಪಾಗಿ ವರ್ಗಾಯಿಸುವ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು? ಹಾಗೂ ಎಷ್ಟು ಅವಧಿಯಲ್ಲಿ ಈ ಕೆಲಸವನ್ನು ಪೂರೈಸಲಾಗುವುದು?

ಶ್ರೀ ಎಂ.ಎಸ್.ಪಾಟೀಲ್ (ಜವಳಿ ಸಚಿವರು):-

ಅ) ನಿಗಮದ ಕೇಂದ್ರ ಕಛೇರಿಯನ್ನು ಬೆಂಗಳೂರಿನಿಂದ ಹುಬ್ಬಳ್ಳಿಗೆ ವರ್ಗಾಯಿಸಲು ಸರ್ಕಾರ ತತ್ವಶಃ ಒಪ್ಪಿದೆ. ಈ ಸ್ಥಳಾಂತರದ ರೂಪುರೇಷೆಗಳನ್ನು ನಿರ್ಧರಿಸುವ ವಿಷಯ ಪರಿಶೀಲಿಸಲಾಗುತ್ತಿದೆ.

ಆ) ಸಾಧ್ಯವಾದಷ್ಟು ಶೀಘ್ರದಲ್ಲಿ ಈ ಕೆಲಸ ಪೂರೈಸಲಾಗುವುದು.

ವಿಷಯ:- ಧಾರವಾಡ ಮಹಾನಗರದಲ್ಲಿರುವ ಅನಧಿಕೃತ ಬಡಾವಣೆ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 185 (497)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ):- ಮಾನ್ಯ ಪೌರಾಡಳಿತ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಹುಬ್ಬಳ್ಳಿ ಧಾರವಾಡ ಮಹಾನಗರದಲ್ಲಿ ಇರುವ ಅನಧಿಕೃತ ವಸತಿ ಬಡಾವಣೆಗಳೆಷ್ಟು?

ಆ) ಅವುಗಳು ಯಾವುವು ಹಾಗೂ ಅವುಗಳನ್ನು ಯಾವ ಸಾಲಿನಲ್ಲಿ ನಿರ್ಮಾಣ ಮಾಡಲಾಗಿದೆ. ವಿವರ ನೀಡುವುದು?

ಇ) ಸದರಿ ಅನಧಿಕೃತ ಬಡಾವಣೆಗಳಲ್ಲಿ ಎಷ್ಟು ಬಡಾವಣೆಗಳಿಗೆ ವಿದ್ಯುಚ್ಛಕ್ತಿ ಸೌಕರ್ಯ ನೀಡಲಾಗಿದೆ. ಉಳಿದ ಬಡಾವಣೆಗಳಿಗೆ ವಿದ್ಯುತ್ ಸೌಕರ್ಯ ಕೊಡುವ ವಿಚಾರ ಸರ್ಕಾರದ ಗಮನದಲ್ಲಿದೆಯೇ?

ಶ್ರೀ ಮಿರಾಜುದ್ದೀನ್ ಎಸ್.ಪಟೇಲ್ (ಪೌರಾಡಳಿತ ಸಚಿವರು):-

ಅ) 75.

ಆ) ಅನುಬಂಧ ಲಗತ್ತಿಸಿದೆ (ನಿರ್ಮಾಣವಾದ ಬಗ್ಗೆ ಮಾಹಿತಿ ಲಭ್ಯವಿರುವುದಿಲ್ಲ).